ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-03-1993.

# *ಅವ್ಯಕ್ತ ವರ್ಷದಲ್ಲಿ ಲಕ್ಷ್ಯ ಮತ್ತು ಲಕ್ಷಣವನ್ನು ಸಮಾನವನ್ನಾಗಿ ಮಾಡಿಕೊಳ್ಳಿ*

(अव्यक्त वर्ष में लक्ष्य और लक्षण को समान बनाओ)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನು ಆತ್ಮ ಪವಿತ್ರ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ನಿರಾಕಾರಿ ಮತ್ತು ಆಕಾರಿ ಬಾಪ್‌ದಾದಾ ಸರ್ವ ಶ್ರೇಷ್ಠ ಬ್ರಾಹ್ಮಣ ಆತ್ಮರನ್ನು ಆಕಾರ ಹಾಗೂ ಸಾಕಾರ ರೂಪದಿಂದ ನೋಡುತ್ತಿದ್ದಾರೆ. ಸಾಕಾರ ರೂಪದವರಾದಂತಹ ತಾವೆಲ್ಲಾ ಆತ್ಮರು ತಂದೆಯ ಸನ್ಮುಖದಲ್ಲಿದ್ದೀರಿ ಹಾಗೂ ಆಕಾರಿ ರೂಪಧಾರಿ ಮಕ್ಕಳು ಸನ್ಮುಖದಲ್ಲಿದ್ದಾರೆ. ಇಬ್ಬರನ್ನು ನೋಡಿ ಬಾಪ್‌ದಾದಾರವರು ಹರ್ಷಿತರಾಗುತ್ತಿದ್ದಾರೆ. ಎಲ್ಲರ ಹೃದಯದಲ್ಲಿ ಒಂದೇ ಸಂಕಲ್ಪವಿದೆ, ಉತ್ಸಾಹವಿದೆ. ನಾವೆಲ್ಲರೂ ತಂದೆಯ ಸಮಾನ ಸಾಕಾರಿಯಿಂದ 'ಆಕಾರಿ' ಮತ್ತು ಆಕಾರಿಯಿಂದ 'ನಿರಾಕಾರಿ' ತಂದೆಯ ಸಮಾನರಾಗಿ ಆಗಬೇಕು ಎಂಬ ಎಲ್ಲರ ಲಕ್ಷ್ಯ ಹಾಗೂ ಲಕ್ಷಣಗಳನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಏನು ಕಂಡು ಬಂದಿತು?

ಮೆಜಾರಿಟಿ ಮಕ್ಕಳ ಲಕ್ಷ್ಯ ಬಹಳ ಒಳ್ಳೆಯದು ದೃಢವಾಗಿದೆ. ಆದರೆ ಲಕ್ಷಣ ಕೆಲವೊಮ್ಮೆ ದೃಢವಾಗಿದೆ ಇನ್ನೂ ಕೆಲವೊಮ್ಮೆ ಸಾಧಾರಣವಾಗಿದೆ. ಲಕ್ಷ್ಯ ಹಾಗೂ ಲಕ್ಷಣದಲ್ಲಿ ಸಮಾನತೆ ಇರುವುದೇ ಸಮಾನರಾಗುವುದರ ಚಿಹ್ನೆಯಾಗಿದೆ. ಲಕ್ಷಣವನ್ನು ಧಾರಣೆ ಮಾಡುವುದರಲ್ಲಿ 99% ಇರುವವರು ಕೆಲವರಿದ್ದಾರೆ. ಬಾಕಿ ನಂಬರ್‌ವಾರ್ ಇದ್ದಾರೆ. ಆದರೆ ಸದಾ, ಸಹಜ ಹಾಗೂ ಸ್ವಾಭಾವಿಕವಾದ ಸಂಸ್ಕಾರವಾಗಿ ಲಕ್ಷಣವನ್ನು ಧಾರಣೆ ಮಾಡುವುದರಲ್ಲಿ 90% ಇರುವವರು ಕಡಿಮೆ ಇದ್ದಾರೆ ಉಳಿದವರು ನಂಬರ್‌ವಾರ್ ಆಗಿದ್ದಾರೆ. ಹಾಗಾದರೆ ಲಕ್ಷ್ಯ ಮತ್ತು ಲಕ್ಷಣದಲ್ಲಿ ಹಾಗೂ ಲಕ್ಷಣವನ್ನು ಸಹ ಸ್ವಾಭಾವಿಕ ಸಂಸ್ಕಾರವನ್ನಾಗಿ ಮಾಡಿಕೊಳ್ಳುವುದರಲ್ಲಿ ಅಂತರ ಏಕೆ ಇದೆ? ಸಮಯಾನುಸಾರ, ಪರಿಸ್ಥಿತಿಯನುಸಾರ, ಸಮಸ್ಯೆಯನ್ನು ಅನುಸರಿಸಿ  ಕೆಲವೊಂದು ಮಕ್ಕಳು ಪುರುಷಾರ್ಥದ ಮುಖಾಂತರ ತಮ್ಮ ಲಕ್ಷ್ಯ ಮತ್ತು ಲಕ್ಷಣವನ್ನು ಸಮಾನವನ್ನಾಗಿ ಮಾಡಿಕೊಳ್ಳುತ್ತಾರೆ. ಆದರೆ ಈ ಲಕ್ಷಣಗಳು ಕೂಡಾ ಸ್ವಭಾವಿಕ ಸಂಸ್ಕಾರ ಆಗಿಬಿಡಲಿ – ಅದರಲ್ಲಿ ಈಗ ಮತ್ತಷ್ಟು ಗಮನವಿರಬೇಕು. ಈ ವರ್ಷ ಅವ್ಯಕ್ತ ಫರಿಶ್ತಾ ಸ್ಥಿತಿಯಲ್ಲಿ ಸ್ಥಿತರಾಗುವಂತಹ ವರ್ಷವನ್ನಾಗಿ ಆಚರಣೆ ಮಾಡುತ್ತಿದ್ದೀರಿ. ಇದನ್ನು ನೋಡಿ ಬಾಪ್‌ದಾದಾರವರು ಮಕ್ಕಳ ಪ್ರೀತಿ ಹಾಗೂ ಪುರುಷಾರ್ಥ ಎರಡನ್ನು ನೋಡಿ ನೋಡಿ ಖುಷಿಯಾಗುತ್ತಿದ್ದಾರೆ. 'ವಾಹ್ ಮಕ್ಕಳೇ, ವಾಹ್' ಎಂಬ ಗೀತೆಯನ್ನು ಹಾಡುತ್ತಿದ್ದಾರೆ. ಜೊತೆ ಜೊತೆಯಲ್ಲಿ ಈಗ ಹಾಗೂ ಮುಂದೆ ಸರ್ವ ಮಕ್ಕಳ ಲಕ್ಷ್ಯ ಮತ್ತು ಲಕ್ಷಣದ ಸಮಾನತೆಯನ್ನು ನೋಡುವುದಕ್ಕೆ ಇಷ್ಟ ಪಡುತ್ತಾರೆ. ತಾವೆಲ್ಲರೂ ಸಹ ಇದನ್ನೇ ಇಷ್ಟ ಪಡುತ್ತೀರಿ ಅಲ್ಲವೇ. ತಂದೆಯು ಬಯಸುತ್ತಾರೆ. ತಾವು ಮಕ್ಕಳೂ ಬಯಸುತ್ತೀರಿ - ಆದರೂ ಮಧ್ಯದಲ್ಲಿ ಏನಿದೆ? ಅದನ್ನು ಸಹ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಪರಸ್ಪರರಲ್ಲಿ ವರ್ಕ್ ಶಾಪ್ ಮಾಡುತ್ತೀರಲ್ಲವೇ.

ಬಾಪ್‌ದಾದಾರವರು ಲಕ್ಷ್ಯ ಮತ್ತು ಲಕ್ಷಣದಲ್ಲಿ ಅಂತರವಾಗುವುದಕ್ಕೆ ವಿಶೇಷ ಒಂದು ಮಾತನ್ನು ನೋಡಿದರು. ಆಕಾರಿ ಫರಿಶ್ತಾ ಆಗಿರಬಹುದು ಅಥವಾ ನಿರಾಕಾರಿ, ಸ್ವಭಾವಿಕ ಸಂಸ್ಕಾರ ಆಗಿರಬಹುದು - ಇದರ ಮೂಲ ಆಧಾರವಾಗಿದೆ ನಿರಹಂಕಾರಿ ಆಗುವುದು. ಅಹಂಕಾರ ಅನೇಕ ಪ್ರಕಾರದಲ್ಲಿದೆ. ಎಲ್ಲದಕ್ಕಿಂತ ವಿಶೇಷವಾಗಿ 'ದೇಹಾಭಿಮಾನ' ಎಂಬ ಪದವನ್ನು ಬಳಸುತ್ತಾರೆ. ಆದರೆ ದೇಹಾಭಿಮಾನದ ವಿಸ್ತಾರ ಬಹಳಷ್ಟಿದೆ ಒಂದು ದೊಡ್ಡ ರೂಪದ ದೇಹಾಭಿಮಾನ ಒಂದಿದೆ. ಕೆಲವು ಮಕ್ಕಳಲ್ಲಿ ಆ ದೇಹಾಭಿಮಾನವೇ ಇಲ್ಲ. ಭಲೇ ಸ್ವಯಂನ ದೇಹ ಅಥವಾ ಅನ್ಯರ ದೇಹ - ಒಂದು ವೇಳೆ ಅನ್ಯರ ದೇಹದ ಆಕರ್ಷಣೆಯೂ ಇರಬಹುದು. ಅದೂ ಸಹ ದೇಹಾಭಿಮಾನವಾಗಿದೆ. ಕೆಲವು ಮಕ್ಕಳು ಈ ದೊಡ್ಡ ರೂಪದಲ್ಲಿ ಪಾಸ್ ಆಗಿರಬಹುದು. ದೊಡ್ಡ ರೂಪದಲ್ಲಿ ದೇಹದ ಆಕಾರದಲ್ಲಿ ಸೆಳೆತ ಅಥವಾ ಅಭಿಮಾನವಿರುವುದಿಲ್ಲ ಆದರೆ ಇದರ ಜೊತೆ-ಜೊತೆ ದೇಹದ ಸಂಬಂಧದಲ್ಲಿ, ನನ್ನ ಸಂಸ್ಕಾರಗಳು ವಿಶೇಷವಾಗಿವೆ, ಬುದ್ಧಿ ವಿಶೇಷವಾಗಿದೆ, ನನ್ನಲ್ಲಿ ವಿಶೇಷ ಗುಣಗಳು ಇವೆ, ವಿಶೇಷ ಕಲೆಗಳು, ವಿಶೇಷ ಶಕ್ತಿಗಳು ಇವೆ ಎಂದು ಅವುಗಳ ಅಭಿಮಾನ ಅರ್ಥಾತ್ ಅಹಂಕಾರ, ನಶೆ, ಆವೇಶ - ಇದೂ ಸಹ ಸೂಕ್ಷ್ಮ ದೇಹಾಭಿಮಾನವಾಗಿದೆ. ಒಂದು ವೇಳೆ ಈ ಸೂಕ್ಷ್ಮ ಅಭಿಮಾನಗಳಲ್ಲಿ ಯಾವುದೇ ಅಭಿಮಾನವಿದೆಯೆಂದರೆ ಸಹಜವಾಗಿ ಮತ್ತು ಸ್ವಾಭಾವಿಕವಾಗಿ ಆಕಾರಿ ಫರಿಶ್ತಾ ಆಗಲು ಸಾಧ್ಯವಿಲ್ಲ, ಅಥವಾ ನಿರಾಕಾರಿಗಳು ಸಹ ಆಗಲು ಸಾಧ್ಯವಿಲ್ಲ. ಏಕೆಂದರೆ ಆಕಾರಿ ಫರಿಶ್ತೆಯಲ್ಲೂ ದೇಹಾಭಿಮಾನವಿಲ್ಲ ಡಬಲ್ ಲೈಟ್ ಆಗಿದ್ದಾರೆ. ದೇಹದ ಅಹಂಕಾರ ನಿರಾಕಾರಿ ಆಗುವುದಕ್ಕೆ ಬಿಡುವುದಿಲ್ಲ. ಎಲ್ಲರೂ ಈ ವರ್ಷ ಒಳ್ಳೆಯ ಗಮನವನ್ನೇ ಇಟ್ಟಿದ್ದೀರಿ. ಉತ್ಸಾಹ ಉಲ್ಲಾಸವಿದೆ.

ಬಯಸುವುದು ಸಹ ಒಳ್ಳೆಯದಿದೆ. ಇಷ್ಟವೂ ಪಡುತ್ತೀರಿ ಆದರೆ ಮತ್ತಷ್ಟು ಅಟೆನ್ಶನ್ ಪ್ಲೀಸ್! "ಯಾವುದೇ ಪ್ರಕಾರದ ಅಭಿಮಾನ ಅಥವಾ ಅಹಂಕಾರ ಸಹಜ ಸ್ವರೂಪದಿಂದ ಪುರುಷಾರ್ಥಿ ಸ್ವರೂಪವನ್ನಾಗಿ ಮಾಡುತ್ತಿಲ್ಲ ತಾನೇ ಎಂದು ಪರಿಶೀಲಿಸಿಕೊಳ್ಳಿರಿ. ಯಾವುದೇ ಸೂಕ್ಷ್ಮ ಅಭಿಮಾನ ಅಂಶ ರೂಪದಲ್ಲಿ ಉಳಿದುಕೊಂಡಿಲ್ಲವೇ, ಅದು ಸಮಯಪ್ರಮಾಣ ಹಾಗು ಸೇವೆಯಪ್ರಮಾಣ ಇಮರ್ಜ್ ಆಗುತ್ತಿಲ್ಲ ತಾನೆ?" ಏಕೆಂದರೆ ಅಂಶ ಮಾತ್ರವೂ ಸಹ ಸಮಯಕ್ಕೆ ಮೋಸ ಮಾಡಿಬಿಡುತ್ತದೆ. ಆ ಕಾರಣ ಈ ವರ್ಷ ಯಾವ ಲಕ್ಷ್ಯವನ್ನಿಟ್ಟಿದ್ದೀರಿ. ಬಾಪ್‌ದಾದಾ ಇದನ್ನೇ ಇಷ್ಟ ಪಡುತ್ತಾರೆ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿರಲೇ ಬೇಕು.

ಕೆಲವೊಮ್ಮೆ ವಿಶೇಷವಾಗಿ ಸ್ಥೂಲ ರೂಪದಲ್ಲಿ ಆ ದಿನ ಅಥವಾ ಆ ಸಮಯದಲ್ಲಿ ಯಾವ ತಪ್ಪನ್ನು ಮಾಡದಿದ್ದರೂ ಆಗಾಗ ಅನಿಸುತ್ತಿರುತ್ತದೆ. ಈ ದಿನ ಅಥವಾ ಈಗ ಏನಾಗಿದೆಯೋ ತಿಳಿಯುತ್ತಿಲ್ಲ, ಸಂತೋಷವಿಲ್ಲ, ಏಕೋ ಇಂದು ಒಂಟಿತನದ ಮತ್ತು ನಿರಾಶೆಯ ಅನುಭವವಾಗುತ್ತಿದೆ. ವ್ಯರ್ಥ ಸಂಕಲ್ಪಗಳ ತೂಫಾನ್ ಏಕೆ ಬರುತ್ತಿದೆ ಎಂದು ಯೋಚಿಸುತ್ತಿರುತ್ತೀರಿ, ಅಮೃತ ವೇಳೆ ಕೂಡ ಎದ್ದಿದ್ದೆ, ಕ್ಲಾಸ್ ಕೂಡ ಮಾಡಿದೆನು, ಸೇವೆಯನ್ನು ಮಾಡಿದೆ, ಉದ್ಯೋಗಕ್ಕೆ ಹೋದೆನು ಆದರೆ ಇಂದು ಹೀಗೇಕೆ? ಕಾರಣವೇನು? ಎಂದು ಯೋಚಿಸುತ್ತಿರುತ್ತೀರಿ ಸ್ಥೂಲ ರೂಪವನ್ನಾದರೆ ಪರಿಶೀಲಿಸಿಕೊಳ್ಳುತ್ತಿದ್ದೀರಿ ಮತ್ತು ಯಾವ ತಪ್ಪನ್ನೂ ಮಾಡಲಿಲ್ಲ ಎಂದು ತಿಳಿಯುತ್ತಿದ್ದೀರಿ ಆದರೆ ಸೂಕ್ಷ್ಮ ಅಭಿಮಾನದ ಸ್ವರೂಪ ಸೂಕ್ಷ್ಮವಾಗಿ ಅಂಶದಲ್ಲಿ ಬರುತ್ತದೆ ಆದ್ದರಿಂದ ಯಾವ ಕೆಲಸವನ್ನೂ ಮಾಡಬೇಕೆನಿಸುವುದಿಲ್ಲ. ವೈರಾಗ್ಯವಾಗಿ, ಉದಾಸೀನವಾಗಿ ಅನಿಸುತ್ತಿರುತ್ತದೆ. ಏಕಾಂತವಾಗಿ ಯಾವುದೋ ಸ್ಥಾನಕ್ಕೆ ಹೋಗಿಬಿಡಬೇಕೆಂದುಕೊಳ್ಳುತ್ತೀರಿ ಅಥವಾ ನಿದ್ರೆ, ವಿಶ್ರಾಂತಿ ಪಡೆಯಬೇಕೆನ್ನುತ್ತೀರಿ. ಅಥವಾ ಪರಿವಾರದಿಂದ ಸ್ವಲ್ಪ ಸಮಯ ದೂರಕ್ಕೆ ಹೋಗಬೇಕೆಂದುಕೊಳ್ಳುತ್ತೀರಿ. ಈ ಎಲ್ಲಾ ಸ್ಥಿತಿಗಳಿಗೆ ಕಾರಣ ಅಂಶದ ಅದ್ಭುತವಾಗಿದೆ. ಅದ್ಭುತ ಎನ್ನಬೇಡಿ, ಅನಾಹುತವೆಂದುಕೊಳ್ಳಿ. ಹಾಗಾದರೆ ಸಂಪೂರ್ಣ ನಿರಹಂಕಾರಿ ಆಗುವುದು ಅರ್ಥಾತ್ ಆಕಾರಿ, ನಿರಾಕಾರಿ ಸಹಜವಾಗುವುದು. ಹೇಗೆ ಕೆಲವೊಮ್ಮೆ ಮನಸ್ಸಾಗುವುದಿಲ್ಲ ಏನು ಸದಾ ಒಂದೇ ದಿನಚರ್ಯದಂತೆ ನಡೆಯಬೇಕಾ? ಬದಲಾವಣೆಯು ಬೇಕಲ್ಲವೇ? ಇಷ್ಟವಿಲ್ಲದಿದ್ದರೂ ಈ ಸ್ಥಿತಿ ಬಂದು ಬಿಡುತ್ತದೆ.

ಯಾವಾಗ ನಿರಹಂಕಾರಿ ಆಗಿ ಬಿಡುತ್ತೀರೋ ಆಗ ಆಕಾರಿ ಹಾಗೂ ನಿರಾಕಾರಿ ಸ್ಥಿತಿಯಿಂದ ಕೆಳಗೆ ಬರುವುದಕ್ಕೆ ಹೃದಯ ಇಷ್ಟ ಪಡುವುದಿಲ್ಲ. ಅದರಲ್ಲೇ! ಲವಲೀನತೆಯ ಅನುಭವ ಮಾಡುತ್ತೀರಿ. ಏಕೆಂದರೆ ತಮ್ಮ ಒರಿಜಿನಲ್ ಅನಾದಿ ಸ್ಥಿತಿ ನಿರಾಕಾರಿ ಆಗಿದೆ. ನಿರಾಕಾರಿ ಆತ್ಮವು ಈ ಶರೀರದಲ್ಲಿ ಪ್ರವೇಶ ಮಾಡಿದೆ. ಶರೀರ ಆತ್ಮದಲ್ಲಿ ಪ್ರವೇಶ ಮಾಡಿಲ್ಲ ಅತ್ಮವು ಶರೀರದಲ್ಲಿ ಪ್ರವೇಶ ಮಾಡಿತು. ಹಾಗಾದರೆ ಅನಾದಿ ಒರಿಜಿನಲ್ ಸ್ವರೂಪ ನಿರಾಕಾರಿ ಆಗಿದೆಯೋ ಅಥವಾ ಶರೀರಧಾರಿ ಆಗಿದೆಯೋ? ಶರೀರದ ಆಧಾರವನ್ನು ತೆಗೆದುಕೊಂಡಿದ್ದೀರಿ ಆದರೆ ತೆಗೆದುಕೊಂಡಿದ್ದು ಯಾರು? ತಾವು ಆತ್ಮರು, ನಿರಾಕಾರದಿಂದ ಸಾಕಾರ ಶರೀರದ ಆಧಾರವನ್ನು ತೆಗೆದುಕೊಂಡಿದ್ದೀರಿ. ಹಾಗಾದರೆ ಒರಿಜಿನಲ್ ಏನಾಯಿತು -

ಆತ್ಮವೋ ಅಥವಾ ಶರೀರವೋ? ಆತ್ಮ. ಇದು ಪಕ್ಕಾ ಇದೆಯೇ? ಹಾಗಾದರೆ ನನ್ನ ಮೂಲ ಸ್ಥಿತಿಯಲ್ಲಿ ಸ್ಥಿತರಾಗುವುದು ಸಹಜವೋ ಅಥವಾ ಆಧಾರ ತೆಗೆದುಕೊಳ್ಳುವ ಸ್ಥಿತಿ ಸಹಜವೋ?

ಅಹಂಕಾರ ಬರಲು ದ್ವಾರ ಒಂದು ಶಬ್ದವಾಗಿದೆ. ಅದು ಯಾವುದಾಗಿದೆ "ನಾನು'' ಈಗ ಅಭ್ಯಾಸವನ್ನು ಮಾಡಿ - ಯಾವಾಗ ನಾನು ಎಂಬ ಶಬ್ದ ಬರುತ್ತದೆಯೋ ಆಗ ಒರಿಜಿನಲ್ ಸ್ವರೂಪವನ್ನು ಮುಂದೆ ತಂದುಕೊಳ್ಳಿ "ನಾನು ಯಾರು"? ನಾನು ಆತ್ಮ ಅಥವಾ ಇಂತಿಂತವರಾ? "ಅನ್ಯರಿಗೆ ಜ್ಞಾನವನ್ನು ಕೊಡುತ್ತೀರಲ್ಲವೇ – 'ನಾನು' ಶಬ್ದ ಹಾರಿಸುವಂತಹದ್ದಾಗಿದೆ ಮತ್ತು ನಾನು ಶಬ್ಧವೇ ಕೆಳಗಡೆ ತರುವಂತಹದ್ದಾಗಿದೆ. ನಾನು ಎಂದು ಹೇಳುವುದರಿಂದ ಒರಿಜಿನಲ್ ನಿರಾಕಾರ ಸ್ವರೂಪ ನೆನಪಿಗೆ ಬಂದು ಬಿಡಲಿ. ಇದು ನ್ಯಾಚುರಲ್ ಆಗಿ ಬಿಡಲಿ, ಎಂದ ಮೇಲೆ ಮೊದಲನೇ ಪಾಠ ಸಹಜವಾಗಿದೆಯಲ್ಲವೇ. ಹಾಗಾದರೆ ಇದನ್ನು ಚೆಕ್ ಮಾಡಿಕೊಳ್ಳಿ. ಅಭ್ಯಾಸ ಮಾಡಿಕೊಳ್ಳಿ - 'ನಾನು' ಎಂಬ ಯೋಚನೆ ಮಾಡಿದಿರಿ ಹಾಗೂ ನಿರಾಕಾರಿ ಸ್ವರೂಪ ಸ್ಮೃತಿಯಲ್ಲಿ ಬಂದು ಬಿಡಲಿ, ಎಷ್ಟು ಬಾರಿ 'ನಾನು' ಶಬ್ದವನ್ನು ಹೇಳುತ್ತೀರಲ್ಲವೇ, ನಾನು ಇದನ್ನು ಹೇಳಿದೆ. 'ನಾನು' ಇದನ್ನು ಮಾಡುತ್ತೇನೆ, 'ನಾನು' ಇದನ್ನು ಮಾಡುತ್ತೇನೆ. ಅನೇಕ ಬಾರಿ ನಾನು ಎನ್ನುವ ಶಬ್ದದ ಉಪಯೋಗವನ್ನು ಮಾಡುತ್ತೀರಿ. ಹಾಗಾದರೆ ಸಹಜ ವಿಧಿ ಇದೇ ಆಗಿದೆ ನಿರಾಕಾರಿ ಅಥವಾ ಆಕಾರಿ ಆಗುವುದು – ಯಾವಾಗಲಾದರೂ 'ನಾನು' ಶಬ್ದವನ್ನು ಉಪಯೋಗಿಸಿ. ತಕ್ಷಣ ತಮ್ಮ ನಿರಾಕಾರಿ ಒರಿಜಿನಲ್ ಸ್ವರೂಪವನ್ನು ಮುಂದೆ ತನ್ನಿ. ಇದು ಕಷ್ಟವೇ ಅಥವಾ ಸಹಜವಾಗಿದೆಯೇ? ಹಾಗಾದರೆ ಈ ಲಕ್ಷ್ಯ ಮತ್ತು ಲಕ್ಷಣವು ಸಮಾನವಾಗಿ ಬಿಟ್ಟದೆಯಲ್ಲವೇ. ಕೇವಲ ಈ ಯುಕ್ತಿ - ನಿರಹಂಕಾರಿ ಆಗುವ ಸಹಜ ಸಾಧನವನ್ನು ತನ್ನದನ್ನಾಗಿ ಮಾಡಿಕೊಂಡು ನೋಡಿ. ಈ ದೇಹಾಭಿಮಾನದ 'ನಾನು' ಸಮಾಪ್ತಿಯಾಗಿ ಬಿಡಲಿ, ಏಕೆಂದರೆ ನಾನು ಶಬ್ದವು ದೇಹ ಅಹಂಕಾರದಲ್ಲಿ ತರುತ್ತದೆ. ಹಾಗೂ ಒಂದು ವೇಳೆ 'ನಾನು ನಿರಾಕಾರಿ ಆತ್ಮ ಸ್ವರೂಪನಾಗಿದ್ದೇನೆ ಎಂಬ ಸ್ಥಿತಿಯಲ್ಲಿ ಬಂದು ಬಿಟ್ಟರೆ 'ನಾನು' ಎಂಬ ಶಬ್ದವೇ ದೇಹಾಭಿಮಾನದಿಂದ ದೂರ ತೆಗೆದುಕೊಂಡು ಹೋಗುತ್ತದೆ. ಸರಿಯೇ. ಇಡೀ ದಿನದಲ್ಲಿ 25-30 ಸಾರಿ ಅವಶ್ಯಕವಾಗಿ ಹೇಳುತ್ತೀರಿ. ಹೇಳುವುದಿಲ್ಲ. ಆದರೆ ಯೋಚನೆ ಮಾಡುತ್ತೀರಿ - 'ನಾನು' ಇದನ್ನು ಮಾಡುತ್ತೇನೆ. ನಾನು ಇದನ್ನು ಮಾಡಬೇಕು... ಪ್ಲಾನ್ ಮಾಡುತ್ತೀರಿ ಹಾಗಾದರೆ ಯೋಚನೆ ಮಾಡುತ್ತೀರಲ್ಲವೇ. ಇಷ್ಟು ಬಾರಿಯ ಅಭ್ಯಾಸ, ಆತ್ಮ ಸ್ವರೂಪದ ಸ್ಮೃತಿ ಏನನ್ನಾಗಿ ಮಾಡಿ ಬಿಡುತ್ತದೆ? ನಿರಾಕಾರಿ, ನಿರಾಕಾರಿಗಳಾಗಿ, ಆಕಾರಿ ಫರಿಶ್ತೆಯಾಗಿ ಕಾರ್ಯ ಮಾಡಿ  ಹಾಗೂ ನಿರಾಕಾರಿ, ಕರ್ಮ-ಸಂಬಂಧದ ಸ್ವರೂಪದಿಂದ ಸಂಬಂಧದಲ್ಲಿ ಬನ್ನಿ. ಸಂಬಂಧದ ಬಂಧನದಲ್ಲಿ ಬರಬೇಡಿ. ದೇಹಾಭಿಮಾನದಲ್ಲಿ ಬರುವುದು ಅರ್ಥಾತ್ ಕರ್ಮಬಂಧನದಲ್ಲಿ ಬರುವುದು. ದೇಹ ಸಂಬಂಧದಲ್ಲಿ ಬರುವುದು ಅರ್ಥಾತ್ ಕರ್ಮ ಸಂಬಂಧದಲ್ಲಿ ಬರುವುದು. ಎರಡರಲ್ಲಿ ಅಂತರವಿದೆ. ದೇಹದ ' ಆಧಾರವನ್ನು ತೆಗೆದುಕೊಳ್ಳುವುದು ಹಾಗೂ ದೇಹದ ವಶದಲ್ಲಿ ಬರುವುದು - ಎರಡರಲ್ಲಿ ಅಂತರವಿದೆ. ಫರಿಶ್ತಾ ಅಥವಾ ನಿರಾಕಾರಿ ಆತ್ಮ ದೇಹದ ಆಧಾರವನ್ನು ತೆಗೆದುಕೊಂಡು ದೇಹದ ಬಂಧನದಲ್ಲಿ ಬರುವುದಿಲ್ಲ, ಸಂಬಂಧವನ್ನು ಇಡುತ್ತದೆ. ಆದರೆ ಬಂಧನದಲ್ಲಿ ಬರುವುದಿಲ್ಲ ಹಾಗಾದರೆ ಬಾಪ್‌ದಾದಾ ಪುನಃ ಈ ವರ್ಷದ ಫಲಿತಾಂಶವನ್ನು ನೋಡುತ್ತಾರೆ. ನಿರಹಂಕಾರಿ, ಆಕಾರಿ ಫರಿಶ್ತಾ ಹಾಗೂ ನಿರಾಕಾರಿ ಸ್ಥಿತಿಯಲ್ಲಿ ಲಕ್ಷ್ಯ ಹಾಗೂ ಲಕ್ಷಣ ಎಷ್ಟು ಸಮಾನವಾಗಿದೆ?

ಮಹಾನತೆಯ ಚಿಹ್ನೆಯಾಗಿದೆ ನಿರ್ಮಾಣತೆ. ಎಷ್ಟು ನಿರ್ಮಾಣರಾಗಿರುತ್ತಾರೆಯೋ ಅಷ್ಟೇ ಎಲ್ಲರ ಹೃದಯದಲ್ಲಿ ಸ್ವತಹ ಮಹಾನ್ ಆಗುತ್ತಾರೆ. ನಿರ್ಮಾಣತೆ ಇಲ್ಲದೇ ಸರ್ವರ ಮಾಸ್ಟರ್ ಸುಖದಾತರಾಗುವುದಕ್ಕೆ ಸಾಧ್ಯವಿಲ್ಲ. ನಿರ್ಮಾಣತೆ ಸಹಜವಾಗಿ ನಿರಹಂಕಾರಿಯನ್ನಾಗಿ ಮಾಡುತ್ತದೆ. ನಿರ್ಮಾಣತೆಯ ಬೀಜ ಮಹಾನತೆಯ ಫಲವನ್ನು ಸ್ವತಃವಾಗಿ ಪ್ರಾಪ್ತಿ ಮಾಡಿಸುತ್ತದೆ. ನಿರ್ಮಾಣತೆ ಎಲ್ಲರ ಹೃದಯದ ಆಶೀರ್ವಾದವನ್ನು ಪ್ರಾಪ್ತಿ ಮಾಡಿಸುವಂತಹ ಸಹಜ ಸಾಧನವಾಗಿದೆ. ನಿರ್ಮಾಣತೆ ಎಲ್ಲರ ಮನಸ್ಸಿನಲ್ಲಿ ನಿರ್ಮಾಣ ಆತ್ಮದ ಪ್ರತಿ ಸಹಜ ಪ್ರೀತಿಯ ಸ್ಥಾನವನ್ನು ತಯಾರು ಮಾಡಿಬಿಡುತ್ತದೆ. ನಿರ್ಮಾಣತೆ ಮಹಿಮಾ ಯೋಗ್ಯರನ್ನಾಗಿ ಸ್ವತಃವಾಗಿ ಮಾಡಿ ಬಿಡುತ್ತದೆ. ಹಾಗಾದರೆ ನಿರಹಂಕಾರಿಯಾಗುವ ವಿಶೇಷ ಚಿಹ್ನೆಯಾಗಿದೆ - ನಿರ್ಮಾಣತೆ. ವೃತ್ತಿಯಲ್ಲೂ ಸಹ ನಿರ್ಮಾಣತೆ, ದೃಷ್ಟಿಯಲ್ಲೂ ಸಹ ನಿರ್ಮಾಣತೆ, ವಾಣಿಯಲ್ಲೂ ಸಹ ನಿರ್ಮಾಣತೆ. ಸಂಬಂಧ-ಸಂಪರ್ಕದಲ್ಲೂ ಸಹ ನಿರ್ಮಾಣತೆ. ಈ ರೀತಿ ನನ್ನ ವೃತ್ತಿಯಲ್ಲಿ ಇರಲಿಲ್ಲ ಆದರೆ ಮಾತಿನಿಂದ ಬಂದು ಬಿಟ್ಟಿತು. ಯಾವುದು ವೃತ್ತಿಯಲ್ಲಿರುತ್ತದೆಯೋ ಅದು ದೃಷ್ಟಿಯಲ್ಲಿರುತ್ತದೆ. ಯಾವುದು ದೃಷ್ಟಿಯಲ್ಲಿರುತ್ತದೆಯೋ ಅದು ವಾಣಿಯಲ್ಲಿರುತ್ತದೆ. ಯಾವುದು ವಾಣಿಯಲ್ಲಿರುತ್ತದೆಯೋ ಅದು ಸಂಬಂಧ-ಸಂಪರ್ಕದಲ್ಲಿ ಬರುತ್ತದೆ. ನಾಲ್ಕರಲ್ಲೂ ಇರಬೇಕು. ಮೂರರಲ್ಲಿದೆ. ಒಂದರಲ್ಲಿಲ್ಲವಾದರೆ ಅಹಂಕಾರ ಬರುವುದಕ್ಕೆ ಅವಕಾಶವಿದೆ. ನಾಲ್ಕರಲ್ಲಿ ನಿರ್ಮಾಣತೆಯುಳ್ಳವರನ್ನೇ ಅವ್ಯಕ್ತ ಫರಿಶ್ತಾ ಎಂದು ಕರೆಯುತ್ತಾರೆ. ಹಾಗಾದರೆ ತಿಳಿಯಿತೇ, ಬಾಪ್‌ದಾದಾರವರು ಏನನ್ನು ಬಯಸುತ್ತಾರೆ ಹಾಗೂ ತಾವು ಏನು ಬಯಸುತ್ತೀರಿ? ಇಬ್ಬರೂ ಬಯಸುವುದು ಒಂದೇ ಆಗಿದೆ ಆದರೆ ಈಗ ಮಾಡುವುದು ಕೂಡ ಒಂದೇ ಆಗಬೇಕು.

ಮುಂದೆ ಸೇವೆಯ ಹೊಸ ಹೊಸ ಪ್ಲಾನ್ಸ್ ಏನು ಮಾಡುತ್ತೀರಿ. ಏನಾದರೂ ಮಾಡಿದ್ದೀರಾ. ಏನಾದರೂ ಮಾಡುತ್ತೀರಾ. ಈ ವರ್ಷವಿರಬಹುದು ಅಥವಾ ಮುಂದಿನ ವರ್ಷ - ಅನ್ಯ ಪ್ಲಾನ್ಸ್ ಹೇಗೆ ಯೋಚನೆ ಮಾಡುತ್ತೀರಿ, ಭಾಷಣವನ್ನು ಮಾಡುತ್ತೀರಾ. ಸಂಬಂಧ ಸಂಪರ್ಕವನ್ನು ಜಾಸ್ತಿ ಮಾಡಿಕೊಳ್ಳುತ್ತೀರಾ. ದೊಡ್ಡ ಪ್ರೋಗ್ರಾಂ ಅನ್ನು ಮಾಡುತ್ತೀರಾ, ಚಿಕ್ಕ ಕಾರ್ಯಕ್ರಮವನ್ನು ಮಾಡುತ್ತೀರಾ - ಇದರ ಯೋಚನೆಯನ್ನಂತೂ ಮಾಡುತ್ತೀರಿ ಆದರೆ ವರ್ತಮಾನ ಸಮಯದ ಗತಿಯ ಪ್ರಮಾಣ ಈಗ ಸೇವೆಯಲ್ಲಿ ತೀವ್ರ ಗತಿ ಬೇಕು ಅದು ಹೇಗೆ ಆಗುತ್ತದೆ? ವಾಣಿಯ ಮುಖಾಂತರ, ಸಂಬಂಧ - ಸಂಪರ್ಕದ ಮುಖಾಂತರವಂತೂ ಸೇವೆಯನ್ನಂತೂ ಮಾಡುತ್ತಿದ್ದೀರಿ, ಮನಸಾ ಸೇವೆಯನ್ನೂ ಮಾಡುತ್ತೀದ್ದೀರಿ ಆದರೆ ಈಗ ಸ್ವಲ್ಪ ಸಮಯದಲ್ಲಿ ಹೆಚ್ಚು ಸೇವೆಯ ಸಫಲತೆ ಬೇಕು. ಸಫಲತೆ ಅರ್ಥಾತ್ ಫಲಿತಾಂಶ. ಅದರ ವಿಧಿಯಾಗಿದೆ ವಾಣಿಯ ಜೊತೆ ಜೊತೆ ಮೊದಲು ನಿಮ್ಮ ಸ್ಥಿತಿ ಮತ್ತು ಸ್ಥಾನದ ವಾತಾವರಣವನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ. ತಮ್ಮ ಜಡ ಚಿತ್ರಗಳು ಯಾವ ಸೇವೆಯನ್ನು ಮಾಡುತ್ತಿವೆ? ವೈಬ್ರೇಷನ್ಸ್ ನ ಮೂಲಕ ಎಷ್ಟು ಭಕ್ತಾತ್ಮರನ್ನು ಪ್ರಸನ್ನ ಮಾಡುತ್ತಿದೆ. ಡಬಲ್ ವಿದೇಶಿಯರ ಮಂದಿರವನ್ನು ನೋಡಿದ್ದೀರಾ? ತಮ್ಮ ಚಿತ್ರಗಳು ಸೇವೆಯನ್ನು ಮಾಡುತ್ತಿವೆಯಲ್ಲವೇ! ಹಾಗಾದರೆ ವಾಣಿಯ ಮೂಲಕ ಭಲೇ ಮಾಡಿ ಆದರೆ ಈಗ ಈ ತರಹ ಪ್ಲಾನಿಂಗ್ ಮಾಡಿ. ವಾಣಿಯ ಜೊತೆ ಜೊತೆಗೆ ವೈಬ್ರೇಷನ್ಸ್‌ನ ಇಂತಹ ವಿಧಿಯನ್ನು ಮಾಡಿರಿ ಹೇಗೆಂದರೆ ವಾಣಿ ಮತ್ತು ವೈಬ್ರೇಷನ್ಸ್ ಡಬಲ್ ಕೆಲಸವನ್ನು ಮಾಡಲಿ. ವೈಬ್ರೇಷನ್ಸ್ ಬಹಳಕಾಲ ಇರುತ್ತದೆ. ವಾಣಿಯಿಂದ ಕೇಳಿರುವಂತಹದ್ದು ಕೆಲವೊಮ್ಮೆ ಕೆಲವರಿಗೆ ಮರೆತೂ ಹೋಗುತ್ತದೆ ಆದರೆ

ವೈಬ್ರೇಷನ್ಸ್ ನ ಮುದ್ರೆ ಹೆಚ್ಚಿನ ಸಮಯ ನಡೆಯುತ್ತದೆ. ಹೇಗೆ ತಾವು ತಮ್ಮ ಜೀವನದಲ್ಲಿ ಅನುಭವಿಗಳಾಗಿದ್ದೀರಿ. ಕೆಲವರ ವೈಬ್ರೇಷನ್ಸ್ ಒಂದು ವೇಳೆ ತಮ್ಮ ಮನದಲ್ಲಿ ಅಥವಾ ಬುದ್ದಿಯಲ್ಲಿ ಕುಳಿತುಕೊಂಡು ಬಿಡುತ್ತದೆ. ಅಂದ ಮೇಲೆ ಯಾರ ಪ್ರತಿಯಾದರೂ ನಿಮ್ಮ ಮನಸ್ಸಿನಲ್ಲಿ ಅಥವಾ ಬುದ್ಧಿಯಲ್ಲಿ ವಿರುದ್ಧ ಭಾವನೆ(ವೈಬ್ರೇಶನ್) ಇದ್ದರೆ ಅದು ಎಷ್ಟು ಸಮಯದವರೆಗೆ ಇರುತ್ತದೆ? ಆ ತರಂಗಗಳು ಒಳಗಡೆಯೇ ಇದ್ದುಬಿಡುತ್ತವೆ ತಾನೇ. ಮಾತನ್ನಾದರೆ ಆ ಸಮಯದಲ್ಲಿಯೇ ಮರೆತು ಹೋಗುತ್ತೀರಿ ಆದರೆ ಮನಸ್ಸು ಮತ್ತು ಬುದ್ಧಿಯಲ್ಲಿ ತರಂಗಗಳ ರೂಪದಲ್ಲಿ ಮುದ್ರೆ ಬಿದ್ದುಬಿಡುತ್ತದೆ. ಈ ತರಂಗಗಳಿಗೆ ವಶವಾಗಿ ಆ ವ್ಯಕ್ತಿಯೊಂದಿಗೆ ಎಷ್ಟು ಸಮಯ ವ್ಯವಹಾರದಲ್ಲಿ ಬರುತ್ತೀರಿ! ಒಳ್ಳೆಯದಾದರೂ ಕೆಟ್ಟದಾದರೂ ವೈಬ್ರೇಶನ್ ಎನ್ನುವುದು ಕಷ್ಟದಿಂದ ತೊಲಗುತ್ತದೆ.

ಆದರೆ ಈ ಆತ್ಮಿಕ ವೈಬ್ರೇಷನ್ಸ್ ಅನ್ನು ಹರಡಿಸಲು ಮೊದಲು ತಮ್ಮ ಮನದಲ್ಲಿ, ಬುದ್ಧಿಯಲ್ಲಿ ವ್ಯರ್ಥದ ವೈಬ್ರೇಷನ್ಸ್ ಅನ್ನು ಸಮಾಪ್ತಿ ಮಾಡಿರಿ ಆಗ ಆತ್ಮಿಕ ವೈಬ್ರೇಷನ್ಸ್ ಅನ್ನು ಹರಡಿಸಬಹುದು. ಯಾರ ಪ್ರತಿಯಾದರೂ ಒಂದುವೇಳೆ ವ್ಯರ್ಥದ ವೈಬ್ರೇಷನ್ಸ್ ಧಾರಣೆ ಮಾಡಿದ್ದೇ ಆದರೆ ಆತ್ಮಿಕ ವೈಬ್ರೇಷನ್ಸ್ ಅನ್ನು ಹರಡಿಸಲಾಗುವುದಿಲ್ಲ. ವ್ಯರ್ಥ ವೈಬ್ರೇಷನ್ಸ್ ಆತ್ಮಿಕ ವೈಬ್ರೇಷನ್ಸ್‌ನ ಎದುರು ಒಂದು ಗೋಡೆಯಾಗಿ ಬಿಡುತ್ತದೆ. ಭಲೇ ಸೂರ್ಯ ಎಷ್ಟೇ ಪ್ರಕಾಶಮಯವಾಗಿರಬಹುದು, ಒಂದು ವೇಳೆ ಗೋಡೆ ಎದುರಿಗೆ ಬಂದರೆ, ಮೋಡ ಎದುರಿಗೆ ಬಂದರೆ ಸೂರ್ಯನ ಪ್ರಕಾಶತೆ ಪ್ರಜ್ವಲಿತವಾಗಲು ಸಾಧ್ಯವಿಲ್ಲ. ಹಾಗಾದರೆ ಪಕ್ಕಾ ವೈಬ್ರೇಷನ್ಸ್ ಗೋಡೆಯಂತಿದೆ ಮತ್ತು ಹಗುರವಾದ ವೈಬ್ರೇಷನ್ಸ್  ಹಗುರವಾದ ಮೋಡ, ಕಪ್ಪಾದ ಮೋಡದಂತೆ. ಅವರು ಆತ್ಮಿಕ ವೈಬ್ರೇಷನ್ಸ್ ಅತ್ಮರವರೆಗೆ ತಲುಪಲು ಅನುಮತಿಸುವುದಿಲ್ಲ. ಹೇಗೆ ಸಾಗರದಲ್ಲಿ ಬಲೆ ಹಾಕುವ ಮೂಲಕ ಒಂದೇ ಬಾರಿಗೆ ಅನೇಕ ವಸ್ತುಗಳನ್ನು ಸಂಗ್ರಹಿಸುತ್ತದೆ ಅಥವಾ ನೀವು ಎಲ್ಲೆಲ್ಲಿ ನಿಮ್ಮ ಬಲೆಯನ್ನು ಹರಡಿ ಒಂದೇ ಸಮಯದಲ್ಲಿ ಅನೇಕರನ್ನು ತಮ್ಮವರನ್ನಾಗಿಸಿಕೊಳ್ಳುವುದರಿಂದ ವೈಬ್ರೇಷನ್ಸ್  ಒಂದೇ ಸಮಯದಲ್ಲಿ ಅನೇಕ ಆತ್ಮರನ್ನು ಆಕರ್ಷಿಸುತ್ತವೆ. **ವೈಬ್ರೇಷನ್ಸ್ ವಾಯುಮಂಡಲವನ್ನು ತಯಾರು ಮಾಡುತ್ತದೆ. ಆದ್ದರಿಂದ ಭವಿಷ್ಯದ ಸೇವೆಯಲ್ಲಿ ವೃತ್ತಿಯ ಮೂಲಕ ಅತ್ಮಿಕ ವೈಬ್ರೇಷನ್ಸ್‌ನ ಮೂಲಕ ಜೊತೆ-ಜೊತೆಗೆ ಸೇವೆ ಮಾಡಿ. ಆಗ ಮಾತ್ರ ವೇಗವಾಗಿರುತ್ತದೆ. ವೈಬ್ರೇಷನ್ಸ್ ಮತ್ತು ವಾಯುಮಂಡಲದ ಜೊತೆ-ಜೊತೆಗೆ ವಾಣಿಯ ಸೇವೆಯನ್ನು ಸಹ ಮಾಡಿದರೆ, ನೀವು ಒಂದೇ ಸಮಯದಲ್ಲಿ ಅನೇಕ ಆತ್ಮರ ಕಲ್ಯಾಣವನ್ನು ಮಾಡಬಹುದು.**

ಉಳಿದ ಕಾರ್ಯಕ್ರಮಗಳಿಗೆ ಮೊದಲು ಮಾಡಿರುವಂತಹ ಸ್ಟೇಜ್‌ನ ಪ್ರಯೋಗವನ್ನು ಬಳಸಿ ಮತ್ತು ಅದನ್ನು ಮತ್ತಷ್ಟು ಹೆಚ್ಚಿಸಿ. ಸಂಪರ್ಕದವರ ಮೂಲಕ ಈ ಸಹಯೋಗವನ್ನು ತೆಗೆದುಕೊಂಡು ಈ ಸೇವೆಯ ವೃದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಸಹಯೋಗಿಗಳ ಸಹಯೋಗವನ್ನು ಯಾವುದಾದರೊಂದು ವಿಧಿಯಿಂದ ಮುಂದುವರೆಸಿದರೆ ಸ್ವತಃವಾಗಿ ಸೇವೆಯಲ್ಲಿ ಸಹಯೋಗಿಗಳಾಗುವುದರಿಂದ ಸಹಜ ಯೋಗಿಗಳಾಗುತ್ತೇವೆ. ಕೆಲವರು ಸೀದಾ ಸಹಜಯೋಗಿಗಳು ಆಗುವುದಿಲ್ಲ. ಆದರೆ ಸಹಯೋಗ ತೆಗೆದುಕೊಳ್ಳುತ್ತಾ ಹೋಗಿ. ಸಹಯೋಗಿಗಳನ್ನಾಗಿ ಮಾಡಿಕೊಳ್ಳುತ್ತಾ ಹೋಗಿ, ಸಹಯೋಗದಿಂದ ಮುಂದುವರೆಯುತ್ತಾ ಸಹಯೋಗ ಅವರನ್ನು ಯೋಗಿಯನ್ನಾಗಿ ಮಾಡುತ್ತದೆ. ಇಂತಹ ಆತ್ಮರಿದ್ದಾರೆ ಹಾಗಾದರೆ ಸಹಯೋಗಿ ಆತ್ಮರನ್ನು ಸ್ಟೇಜ್‌ನಲ್ಲಿ ತನ್ನಿರಿ, ಅವರ ಸಹಯೋಗವನ್ನು ಸಫಲ ಮಾಡಿ, ಏನು

ಮಾಡಬೇಕೆಂದು ತಿಳಿಯಿತೇ. ಒಂದೇ ಆತ್ಮವು ಸಹಯೋಗಿಯಾದರೆ ಆ ಆತ್ಮ ಪ್ರಾಕ್ಟಿಕಲ್ ನಲ್ಲಿ ಸಹಯೋಗವನ್ನು ತೆಗೆದುಕೊಳ್ಳುವುದರಿಂದ, ಕೊಡುವುದರಲ್ಲಿ ಪ್ರತ್ಯಕ್ಷ ಆಶೀರ್ವಾದದಿಂದ ಸಹಜ ಮುಂದುವರೆಯುತ್ತಾರೆ ಹಾಗೂ ಅನೇಕರ ಸೇವೆಗೆ ನಿಮಿತ್ತರಾಗುತ್ತಾರೆ.

ಜೊತೆ-ಜೊತೆಗೆ ಇಡೀ ವರ್ಷದಲ್ಲಿ ಒಂದು ತಿಂಗಳನ್ನು ನಿಗಧಿ ಪಡಿಸಿ - ಕೆಲವೊಂದು ತಿಂಗಳು ವಿಶೇಷ ಸ್ವಯಂನ ಪುರುಷಾರ್ಥ ಶ್ರೇಷ್ಠ ಶಕ್ತಿಯನ್ನು ಧಾರಣೆ ಮಾಡುವ ಅಭ್ಯಾಸ, ಅದನ್ನು ತಮ್ಮ ತಪಸ್ಯಾ, ರಿಟ್ರೇಟ್ ಅಥವಾ ಭಟ್ಟಿ ಎಂದು ಹೇಳುತ್ತೀರಿ. ಪ್ರತಿಯೊಂದು ದೇಶದ ಪ್ರಮಾಣ ಎರಡೆರಡು ತಿಂಗಳು ಫಿಕ್ಸ್ ಮಾಡಿ ಹೇಗೆ ಸೀಜನ್ ಇರುತ್ತದೆ. ಎರಡು ತಿಂಗಳು ತಪಸ್ಸಿಗೆ, ಎರಡು ತಿಂಗಳು ಚಿಕ್ಕ ಚಿಕ್ಕ ಸೇವೆಗಳಿಗೆ, ಎರಡು ತಿಂಗಳು ದೊಡ್ಡ ರೂಪದಲ್ಲಿ ಸೇವೆಯನ್ನು ಮಾಡುವುದಕ್ಕೆ - ಈ ರೀತಿ ಫಿಕ್ಸ್ ಮಾಡಿ. ಆದರೆ 12 ತಂಗಳೂ ಸೇವೆಯಲ್ಲಿ ಇಷ್ಟೊಂದು ಬಿಜಿಯಾಗಿರುತ್ತೀರಿ. ಸ್ವಯಂಗಾಗಿ ಟೈಮ್ ಕಡಿಮೆ ಸಿಗುತ್ತದೆ ಎನ್ನುವಂತೆ ಅಲ್ಲ. ಯಾವುದೇ ದೇಶದಸೀಜನ್ ಇರಲಿ, ಕೆಲವೊಂದು ಸಮಯ ಈ ರೀತಿಯಾಗುತ್ತದೆ ಯಾವುದರಲ್ಲೂ ಹೊರಗಿನ ವಿಶೇಷ ಸೇವೆ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಸಮಯವನ್ನು ತಮ್ಮ ಪ್ರಗತಿಯ ಪ್ರತಿ ವಿಶೇಷ ರೂಪದಿಂದ ಇಡಿ. ಇಡೀ ವರ್ಷ ಸೇವೆಯನ್ನು ಮಾಡುವುದು ಇದೂ ಕೂಡ ಸಾಧ್ಯವಿಲ್ಲ. ಇಡೀ ವರ್ಷ ಕೇವಲ ತಪಸ್ಸನ್ನು ಮಾಡುವುದು - ಇದೂ ಸಹ ಆಗುವುದಿಲ್ಲ. ಆದ ಕಾರಣ ಎರಡನ್ನು ಜೊತೆ-ಜೊತೆ ಲಕ್ಷ್ಯವನ್ನು ಇಡುತ್ತಾ ತನ್ನ ಸ್ಥಾನದ ಪ್ರಮಾಣ ನಿಗಧಿ ಮಾಡಿ ಅದರಲ್ಲಿ ಸೇವೆ ಹಾಗೂ ಸ್ವಯಂನ ಪ್ರಗತಿ - ಎರಡು ಜೊತೆಜೊತೆಯಲ್ಲಿ ನಡೆಯಬೇಕು.

ಒಳ್ಳೆಯದು. ಈ ವರ್ಷ ಸೀಜನ್‌ನ ಸಮಾಪ್ತಿಯಾಗುತ್ತದೆ. ಸಮಾಪ್ತಿಯಲ್ಲಿ ಏನು ಮಾಡಲಾಗುತ್ತದೆ. 'ಸಮಾಪ್ತಿಯಲ್ಲಿ ಒಂದು ಸಮಾರೋಹವನ್ನು ಮಾಡಲಾಗುತ್ತದೆ ಮತ್ತು ಎರಡನೆಯದು ಅಧ್ಯಾತ್ಮಿಕತೆಯ ಮಾತುಗಳನ್ನು ಸ್ವಾಹ ಮಾಡಲಾಗುತ್ತದೆ. ಹಾಗಾದರೆ ಸಮಾರೋಹವನ್ನು ನೆನ್ನೆ ಆಚರಿಸಿಬಿಟ್ಟಿದ್ದೀರಾ. (ನೆನ್ನೆ 10 ವರ್ಷದ ಹಳೆಯ ಡಬಲ್ ವಿದೇಶಿ ಸಹೋದರ-ಸಹೋದರಿಯರ ಸೆರೆಮನಿಯನ್ನು ಆಚರಿಸಲಾಗಿತ್ತು) ನೋಡುವಂತಹವರೂ ಆಚರಿಸಿದಿರಾ ಅಥವಾ ಕೇವಲ ಕುಳಿತು ಕೊಳ್ಳುವಂತಹವರಾ? ಅಥವಾ ಕೇವಲ 10 ವರ್ಷದವರು ಆಚರಿಸಿದಿರಾ? ಎಲ್ಲರೂ ಆಚರಿಸಿದಿರಲ್ಲವೇ. ಈಗ ಏನು ಸ್ವಾಹ ಮಾಡುತ್ತೀರಿ? ಒಂದು ಮಾತು ವಿಶೇಷ ಮನಸ್ಸು, ಬುದ್ಧಿಯಿಂದ ಸ್ವಾಹ ಮಾಡಿ, ವಾಣಿಯಿಂದ ಅಲ್ಲ, ಕೇವಲ ಓದಿ ಬಿಟ್ಟೆನು ಅಥವಾ ಇಲ್ಲ. ಮನಸ್ಸು ಬುದ್ದಿಯಿಂದ ಸ್ವಾಹ ಮಾಡಿ, ನಂತರ ನೋಡಿ ಸ್ವಯಂ ಹಾಗು ಸೇವೆಯ ತೀವ್ರಗತಿ ಹೇಗಿರುತ್ತದೆ ಎಂದು. ಹಾಗಾದರೆ ಇಂದಿನ ಅಲೆಯಾಗಿದೆ - ಯಾವುದೇ ಆತ್ಮನ ಪ್ರತಿ ವ್ಯರ್ಥ ವೈಬ್ರೇಷನ್ಸ್ ಅನ್ನು ಸ್ವಾಹ ಮಾಡಿ. ಸ್ವಾಹ ಮಾಡುತ್ತೀರಾ? ಅಥವಾ ಸ್ವಲ್ಪ ಸ್ವಲ್ಪ ಉಳಿದುಕೊಳ್ಳುತ್ತದೆಯೇ? ಈ ರೀತಿ ತಿಳಿಯಬೇಡಿ. ಇವರು ಇರುವುದೇ ಈ ರೀತಿ ವೈಬ್ರೇಷನ್ಸ್ ಅಂತೂ ಇರುತ್ತದೆ ಅಲ್ಲವೇ. ಹೇಗೆ ಇರಲಿ ಆದರೆ ನಕಾರಾತ್ಮಕ ವೈಬ್ರೇಷನ್ಸ್ ಅನ್ನು ಬದಲಾವಣೆ ಮಾಡಿ ಪಾಸಿಟಿವ್ ವೈಬ್ರೇಷನ್ಸ್ ಅನ್ನು ಇಟ್ಟುಕೊಂಡಾಗ ಆ ಆತ್ಮನೂ ಸಹ ನೆಗೆಟೀವ್ ನಿಂದ ಪಾಸಿಟಿವ್ ನಲ್ಲಿ ಬಂದೇ ಬಿಡುತ್ತಾರೆ. ಬರಲೇಬೇಕು. ಏಕೆಂದರೆ ಎಲ್ಲಿಯವರೆಗೆ ಈ ವ್ಯರ್ಥ ವೈಬ್ರೇಷನ್ಸ್ ಮನಸ್ಸು ಬುದ್ಧಿಯಲ್ಲಿರುತ್ತದೆಯೋ ಅಲ್ಲಿಯವರೆಗೂ ತೀವ್ರಗತಿಯ ಸೇವೆಯನ್ನು ಮಾಡಲು ಸಾಧ್ಯವಿಲ್ಲ.

ವೃತ್ತಿಯ ಮುಖಾಂತರ ವೈಬ್ರೇಷನ್ಸ್ ಅನ್ನು ಹರಡಿಸಬೇಕು. ವೃತ್ತಿಯಾಗಿದೆ ರಾಕೆಟ್. ಅದು ಇಲ್ಲಿ ಕುಳಿತಿದ್ದ ಹಾಗೆ ಎಲ್ಲಿಗೆ ಬೇಕಾದರೂ ಎಷ್ಟೇ ಪವರ್ ಫುಲ್ ಪರಿವರ್ತನೆಯನ್ನು ಮಾಡುವುದಕ್ಕೆ ಇಷ್ಟ ಪಟ್ಟರೂ ಮಾಡಬಹುದು. ಇದು ಆತ್ಮೀಕ ರಾಕೆಟ್ ಆಗಿದೆ. ಇದರಿಂದ ಎಲ್ಲಿಯವರೆಗೆ ಎಷ್ಟು ಜನರಿಗೆ ತಲುಪಿಸುವುದಕ್ಕೆ ಇಷ್ಟ ಪಡುತ್ತೀರೋ ಅಷ್ಟು ಶಕ್ತಿಶಾಲಿ ವೃತ್ತಿಯ ವೈಬ್ರೇಷನ್ಸ್‌ನಿಂದ, ವಾಯುಮಂಡಲವನ್ನು ತಯಾರು ಮಾಡಬಹುದು. ಭಲೇ ಅದು ಸತ್ಯವಾಗಿ ರಾಂಗ್ ಆಗಿರಬಹುದು ಆದರೆ ತಾವು ಅವರ ತಪ್ಪನ್ನು ಧಾರಣೆ ಮಾಡಬೇಡಿ. ತಪ್ಪನ್ನು ತಾವು ಏಕೆ ಧಾರಣೆ ಮಾಡುತ್ತೀರಿ. ಇದು ಶ್ರೀಮತವಾಗಿದೆಯೇ? ತಿಳಿದುಕೊಳ್ಳುವುದು ಬೇರೆ ಮಾತಾಗಿದೆ. ಭಲೇ ಜ್ಞಾನ ಸ್ವರೂಪರಾಗಿರಿ ಆದರೆ ಜ್ಞಾನ ಸ್ವರೂಪದ ಜೊತೆ ಪವರ್ ಫುಲ್ ಆಗಿ ಅದನ್ನು ಸಮಾಪ್ತಿ ಮಾಡಿಬಿಡಿ. ತಿಳಿದುಕೊಳ್ಳುವುದು ಬೇರೆ ಮಾತಾಗಿದೆ. ಎದುರಿಸುವುದು ಬೇರೆ ಮಾತಾಗಿದೆ. ಸಮಾಪ್ತಿ ಮಾಡುವುದು ಬೇರೆ ಮಾತಾಗಿದೆ. ಭಲೇ ಇದು ತಪ್ಪಾಗಿದೆ ಅಥವಾ ಸರಿಯಾಗಿದೆ, ಇದು ಈ ರೀತಿಯಾಗಿದೆ, ಎಂದು ತಿಳಿದುಕೊಳ್ಳುತ್ತೀರಿ. ಆದರೆ ಒಳಗಡೆ ಅದನ್ನು ಸಮಾವೇಶ ಮಾಡಿಕೊಳ್ಳಬಾರದು. ಸಮಾವೇಶ ಮಾಡಿಕೊಳ್ಳಲು ಮಾತ್ರ ಬರುತ್ತದೆಯೇ? ಸಮಾಪ್ತಿ ಮಾಡುವುದು ಬರುವುದಿಲ್ಲವೇ. ಜ್ಞಾನ ಅರ್ಥಾತ್ ತಿಳುವಳಿಕೆ ಆದರೆ ಬುದ್ಧಿವಂತರು ಎಂದು ಯಾರಿಗೆ ಹೇಳಲಾಗುತ್ತದೆ ಎಂದರೆ ಯಾರಿಗೆ ತಿಳಿದುಕೊಳ್ಳುವುದೂ ಬರುತ್ತದೆ, ಸಮಾಪ್ತಿ ಮಾಡಲೂ ಬರುತ್ತದೆ. ಪರಿವರ್ತನೆ ಮಾಡುವುದೂ ಸಹ ಬರಬೇಕು.

ಈ ವರ್ಷ ಮನಸ್ಸು ಹಾಗೂ ಬುದ್ಧಿಯಿಂದ ಸಂಪೂರ್ಣ ವ್ಯರ್ಥದಿಂದ ಮುಕ್ತರಾಗಿ. ಇದು ತೀವ್ರಗತಿಯನ್ನು ಸಾಧಾರಣ ಗತಿಯಲ್ಲಿ ತಂದು ಬಿಡುತ್ತದೆ. ಇದಕ್ಕಾಗಿ ಈ ಸಮಾಪ್ತಿ ಸಮಾರೋಹವನ್ನು ಮಾಡಿ ಅರ್ಥಾತ್ ಸ್ವಾಹ ಮಾಡಿ. ಸಂಪೂರ್ಣ ಕ್ಲೀನ್. ಹೇಗೆ ಇರಲಿ ಆದರೆ ಕ್ಷಮೆಯನ್ನು ಮಾಡಿ, ಶುಭ ಭಾವನೆ, ಶುಭ ಕಾಮನೆಯ ವೃತ್ತಿಯಿಂದ ಶುಭ ವೈಬ್ರೇಷನ್ಸ್ ಅನ್ನು ಧಾರಣೆ ಮಾಡಿ. ಏಕೆಂದರೆ ಕೊನೆಯಲ್ಲಿ ಮುಂದುವರೆಯುತ್ತಾ ಇದೇ ವೃತ್ತಿ 'ವೈಬ್ರೇಷನ್ಸ್ ತಮ್ಮ ಸೇವೆಯನ್ನು ಮುಂದುವರೆಸುತ್ತದೆ, ಆಗ ಬೇಗ-ಬೇಗ ಕಡಿಮೆ ಎಂದರೆ ಕಡಿಮೆ ಒಂದು ಲಕ್ಷವನ್ನು ಮಾಡಬಹುದು. ತಿಳಿಯಿತೇ, ಏನು ಸ್ವಾಹ ಮಾಡಬೇಕೆಂದು? ವ್ಯರ್ಥ ವೃತ್ತಿ. ವ್ಯರ್ಥ ವೈಬ್ರೇಷನ್ಸ್‌ನ ಸ್ವಾಹ, ನಂತರ ನೋಡಿ ನ್ಯಾಚುರಲ್ ಯೋಗಿ ಹಾಗೂ ನೇಚರ್ ಫರಿಶ್ತಾ ಆಗಿಯೇ ಬಿಡುತ್ತದೆ. ಈ ಅನುಭವದಲ್ಲಿ ರಿಟ್ರೇಟ್ ಮಾಡಿ, ವರ್ಕ್ ಶಾಪ್ ಮಾಡಿ - 'ಹೇಗಾಗುತ್ತದೆ. ಎನ್ನುವುದಲ್ಲ, ಈ ರೀತಿ ಆಗುತ್ತದೆ.' ಒಳ್ಳೆಯದು.

**ಸದಾ ಸ್ವಯಂಗೆ ಮತ್ತೆ ಮತ್ತೆ & ಒರಿಜಿನಲ್ ಸ್ವರೂಪ 'ನಾನು ನಿರಾಕಾರಿಯಾಗಿದ್ದೇನೆ' - ಈ ರೀತಿ ನಿಶ್ಚಯ ಹಾಗೂ ನಶೆಯಲ್ಲಿ ಹಾರುವಂತಹ, ಸದಾ ನಿರ್ಮಾಣತೆಯ ಮುಖಾಂತರ ಮಹಾನತೆಯ ಪ್ರಾಪ್ತಿಯ ಅನುಭವಿ ಆತ್ಮರಿಗೆ, ಇಂತಹ ನಿರ್ಮಾಣ, ಸದಾ ಮಹಾನ್, ಹಾಗೂ ಸದಾ ಆಕಾರಿ, ನಿರಾಕಾರಿ ಸ್ಥಿತಿಯನ್ನು ನೇಚರ್ ಹಾಗೂ ನ್ಯಾಚುರಲ್ ಆಗಿ ಮಾಡಿಕೊಳ್ಳುವಂತಹ ಸರ್ವ ಶ್ರೇಷ್ಠ ಆತ್ಮರಿಗೆ ಬಾಪ್ ದಾದಾರವರ ಬಹಳ-ಬಹಳ-ಬಹಳ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 26-03-1993.

*ಅವ್ಯಕ್ತ ವರ್ಷದಲ್ಲಿ ಲಕ್ಷ್ಯ ಮತ್ತು ಲಕ್ಷಣವನ್ನು ಸಮಾನವಾಗಿ ಮಾಡಿಕೊಳ್ಳಿ.*

ಮೆಜಾರಿಟಿ ಮಕ್ಕಳ ಲಕ್ಷ್ಯ ಬಹಳ ಒಳ್ಳೆಯದು, ದೃಢವಾಗಿಯೂ ಇದೆ ಆದರೆ ಲಕ್ಷಣ ಕೆಲವೊಮ್ಮೆ ದೃಢವಾಗಿ ಇನ್ನೂ ಕೆಲವೊಮ್ಮೆ ಸಾಧಾರಣವಾಗಿದೆ. ಲಕ್ಷ್ಯ ಹಾಗೂ ಲಕ್ಷಣದಲ್ಲಿ ಸಮಾನತೆ ಇರುವುದೇ ಸಮಾನರಾಗುವುದರ ಚಿಹ್ನೆಯಾಗಿದೆ. ಲಕ್ಯ ಮತ್ತು ಲಕ್ಷಣದಲ್ಲಿ ಅಂತರವಾಗುವುದಕ್ಕೆ ವಿಶೇಷವಾದ ಒಂದು ಕಾರಣವಿದೆ ಅದು ದೇಹ ಅಭಿಮಾನ ಎಂಬ ಪದವನ್ನು ಬಹಳಷ್ಟು ಬಳಸುತ್ತಾರೆ. ಕೆಲವು ಮಕ್ಕಳಿಗೆ ದೊಡ್ಡರೂಪದ ದೇಹ ಅಭಿಮಾನವಿರುವುದಿಲ್ಲ ಆದರೆ ನನ್ನ ಸಂಸ್ಕಾರಗಳು ವಿಶೇಷವಾಗಿವೆ, ಬುದ್ಧಿ ವಿಶೇಷವಾಗಿದೆ , ನನ್ನಲ್ಲಿ ವಿಶೇಷ ಗುಣಗಳು ಇವೆ, ವಿಶೇಷ ಕಲೆಗಳು, ವಿಶೇಷ ಶಕ್ತಿಗಳು ಇವೆ ಎಂದು ಇವುಗಳ ಅಭಿಮಾನ ಅರ್ಥಾತ್ ಅಹಂಕಾರ, ನಶೆ, ಆವೇಶ, ಇದೆ. ಇದು ಸಹ ಸೂಕ್ಷ್ಮ ದೇಹ ಅಭಿಮಾನವಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಸಮಾನವಾಗಿ ಸಾಕಾರದಿಂದ ಆಕಾರಿ, ಆಕಾರಿಯಿಂದ ನಿರಾಕಾರಿ ಆಗುತ್ತೇನೆ ಎಂಬ ಸಂಕಲ್ಪ ಮತ್ತು ಉತ್ಸಾಹದಿಂದ ಇದ್ದೇನೆ.

2. ನಾನು ಪುರುಷಾರ್ಥದಿಂದ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿ ತಯಾರು ಮಾಡಿಕೊಂಡಿದ್ದೇನೆ.

3. ನಾನು ಸಂಪೂರ್ಣ ನಿರಾಕಾರಿಯಾಗಿ ಆಕಾರಿ ಫರಿಶ್ತಾ ಮತ್ತು ನಿರಾಕರಿ ಸ್ಥಿತಿಯನ್ನು ಸ್ವತಹ ಸಂಸ್ಕಾರವನ್ನಾಗಿ ಮಾಡಿಕೊಂಡಿದ್ದೇನೆ.

4. ನಾನು ಸ್ಥೂಲದೇಹಾಭಿಮಾನ (ಸ್ವಯಂ ಮತ್ತು ಇತರರ ದೇಶದ ಪ್ರತಿ ಆಕರ್ಷಣೆ) ಮತ್ತು ಸೂಕ್ಷ್ಮವಾದ ದೇಹಾಭಿಮಾನವನ್ನು( ಸ್ವಯಂ ನ ವಿಶೇಷತೆಗಳು, ವಿಶೇಷಗುಣಗಳು, ವಿಶೇಷ ಕಲೆಗಳು, ವಿಶೇಷ ಶಕ್ತಿಗಳ ಅಹಂಕಾರ, ನಶೆ, ಆವೇಶ) ಸಮಾಪ್ತಿ ಮಾಡಿ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿ ಇಟ್ಟುಕೊಂಡಿದ್ದೇನೆ.

5. ನಾನು ಸೂಕ್ಷ್ಮ ರೂಪದ ಅಭಿಮಾನದ ಅಂಶವನ್ನು ಸಮಾಪ್ತಿ ಮಾಡಿ ಸದಾ ನಿರಹಂಕಾರಿ ಸ್ಥಿತಿಯಲ್ಲಿ ಲವಲೀನವಾಗಿದ್ದೇನೆ.

6. ನಾನು "ನಾನು" ಎಂಬ ಪದವನ್ನು ಉಪಯೋಗಿಸಿದಾಗೆಲ್ಲ ನಿರಾಕಾರಿ ಸ್ವರೂಪದ ಸ್ಮೃತಿಯನ್ನು ಮಾಡಿ ದೇಹ ಅಭಿಮಾನದ ನಾನು ಎಂಬುದನ್ನು ಸಮಾಪ್ತಿ ಮಾಡಿದ್ದೇನೆ.

7. ನಾನು ನಿರಾಕಾರಿಯಿಂದ ಆಕಾರಿ ಫರಿಶ್ತೆಯಾಗಿ ಕರ್ಮ ಸಂಬಂಧದ ಸ್ವರೂಪದಿಂದ ಸಂಬಂಧದಲ್ಲಿ ಬಂದು ಮತ್ತು ಹಿಂತಿರುಗಿ ನಿರಾಕಾರ ಸ್ಥಿತಿಯಲ್ಲಿ ಇರುತ್ತೇನೆ.

8. ನಾನು ನಿರ್ಮಾಣತೆಯ ಗುಣದಿಂದ ಎಲ್ಲರ ಹೃದಯದಲ್ಲಿ ಸ್ವತಹ ಮಹಾನ್ ಆಗಿದ್ದೇನೆ, ಸರ್ವರ ಮಾಸ್ಟರ್ ಸುಖದಾತನಾಗಿದ್ಧದೇನೆ, ಮಹಾನತೆಯ ಫಲವನ್ನು ಸ್ವತಹವಾಗಿ ಪ್ರಾಪ್ತಿ ಮಾಡಿಕೊಂಡಿದ್ದೇನೆ, ಎಲ್ಲರ ಹೃದಯದ ಆಶೀರ್ವಾದವನ್ನು ಪಡೆದು ಎಲ್ಲರ ಪ್ರೀತಿಗೆ ಪಾತ್ರವಾಗಿ, ಮಹಿಮಾ ಯೋಗ್ಯವಾಗಿದ್ದೇನೆ.

9. ನಾನು ವ್ಯರ್ಥ ವೈಬ್ರೆಶನ್ಸ್ ಅನ್ನು ಸಮಾಪ್ತಿ ಮಾಡಿ ತೀವ್ರ ವೇಗದಿಂದ ಮತ್ತು ಶಕ್ತಿಯಿಂದ ಆತ್ಮಿಕ ವೈಬ್ರೇಶನ್ಸನ್ನು ವಿಶ್ವವೆಲ್ಲಡೆ ವ್ಯಾಪಿಸಿದ್ದೇನೆ.

10. ನಾನು ವಾಣಿಯ ಸೇವೆಯೊಂದಿಗೆ ಮನಸಾ ಅರ್ಥಾತ್ ವೈಬ್ರೇಶನ್ಸ್ ಮತ್ತು ವಾಯುಮಂಡಲದ ಸೇವೆಯನ್ನು ಮಾಡಿ ಒಂದೇ ಸಮಯದಲ್ಲಿ ಅನೇಕಾತ್ಮರ ಕಲ್ಯಾಣವನ್ನು ಮಾಡಿದ್ದೇನೆ.

11. ನಾನು ಆತ್ಮಿಕ ಸಹೋದರರನ್ನು ರುದ್ರ ಜ್ಞಾನ ಯಜ್ಞಕ್ಕೆ ಸಹ ಯೋಗಿಗಳನ್ನಾಗಿ ಮಾಡಿಕೊಳ್ಳುತ್ತಾ, ಅವರನ್ನು ಮುಂದುವರೆಸುತ್ತಾ ಸಹಜ ಯೋಗಿಯನ್ನಾಗಿ ತಯಾರು ಮಾಡಿದ್ದೇನೆ. ಅವರು ಅನೇಕರ ಸೇವೆಗೆ ನಿಮಿತ್ತರಾದರು.

12. ನಾನು ಸ್ವಯಂನ ಪ್ರಗತಿಯೊಂದಿಗೆ ಸೇವೆಯನ್ನು ಮಾಡುವ ಲಕ್ಷ್ಯವನ್ನು ಇಟ್ಟುಕೊಂಡಿದ್ದೇನೆ.

13. ನಾನು ಯಾವುದೇ ಆತ್ಮನ ಪ್ರತಿ ಇರುವ ವ್ಯರ್ಥ ವೈಬ್ರೇಶನನ್ನು ಸ್ವಾಹಾ ಮಾಡಿ ಸ್ವ ಉನ್ನತಿ ಮತ್ತು ಸೇವೆಯಲ್ಲಿ ತೀವ್ರಗತಿಯನ್ನು ತಂದಿದ್ದೇನೆ.

14. ನಾನು ವೃತ್ತಿಯ ಮುಖಾಂತರ ಪವರ್ಫುಲ್ ವೈಬ್ರೇಶನನ್ನು ಹರಡಿಸಿ ರಾಕೆಟ್ ವೇಗದಲ್ಲಿ ವಿಶ್ವಾತ್ಮರನ್ನು, ವಾಯುಮಂಡಲವನ್ನು ಪರಿವರ್ತನೆ ಮಾಡಿದ್ದೇನೆ.

15. ನಾನು ವ್ಯರ್ಥವೃತ್ತಿಯನ್ನು ಸಂಪೂರ್ಣ ಸ್ವಾಹ ಮಾಡಿ ಶುಭಭಾವನೆ, ಶುಭಕಾಮನೆಯ ವೃತ್ತಿಯಿಂದ ಶುಭ ವೈಬ್ರೇಶನ್ಸ್ ಅನ್ನು ಧಾರಣೆ ಮಾಡಿ ಸಮಾಪ್ತಿ ಸಮಾರೋಹವನ್ನು ಆಚರಿಸಿಕೊಂಡಿದ್ದೇನೆ.